ನಾಯರ್ ಅವರೆ, ಪೋರ್ಕ್ಕೊಳತ್ತಿಗಿರಬೇಕು ಅಲ್ವಾ? ನಾನು ಬಿಡ್ತಿನಿ ಬನ್ನಿ, ನನಗೆ ಚಹಾಕ್ಕೆ ಕಾಸು ಕೊಟ್ಟರೆ ಸಾಕು'' ಎಂದ.

''ಬೇಡ ಬೇಡ ಗೋಪಿ, ನಾನು ನಡ್ಕೊಂಡೆ ಹೋಗ್ತಿನಿ'' ರಾಮನ್ ಕುಟ್ಟಿ ನಾಯರ್ ಹೇಳಿದರು.

''ಈ ಮಧ್ಯಾಹ್ನದ ಉರಿ ಬಿಸಿಲಿನ, ಇಷ್ಟು ಹೊತ್ತಿನಲ್ಲಿ ನಡೆದರೆ ಮತ್ತೆ ನಿಮಗೆ ನಡೆಯಲಿಕ್ಕಾಗೋಲ್ಲ.''

''ನಿಜ ನಿಜ'' ಹಾಗೆಂದು ರಾಮನ್ ಕುಟ್ಟಿ ನಾಯರ್ ಟ್ಯಾಕ್ಸಿಯಲ್ಲಿ ಹತ್ತಿ ಕುಳಿತರು. ಆಗ ನೆನಪಾಯಿತು. ಗೋಪಿಯ ಮಾವನ ಮಗಳನ್ನು ರವಿ ಕೈಸನ್ನೆ ಮಾಡಿ ಕರೆದಿದ್ದಕ್ಕೆ ಕುನ್ನಂಕುಳಂನವರು ಸಂಘಟಿತರಾಗಿ ತದುಕಿದ ಘಟನೆ. ಅದರಿಂದ ತನ್ನ ಅಭಿಮಾನಕ್ಕೆ ಭಂಗವುಟಾಯಿತು. ಇನ್ನು ರವಿಯ ಕಡೆ ನಿಂತು ವಾದಿಸಲು ಸಾಧ್ಯವೆ, ಅವನು ನಗರದಲ್ಲಿ ಬೆಳೆದ ಯುವಕ. ಸ್ತ್ರೀ–ಪುರುಷ ಎನ್ನುವ ವ್ಯತ್ಯಾಸ ಕೂಡ ಅವನಿಗೆ ಗೊತ್ತಿಲ್ಲ. ಅವನು ತುಂಬಾ ಮುಗ್ಧ ಎಂದೆಲ್ಲಾ ಹೇಳಿ ದುಷ್ಟಕೂಟವನ್ನು ಹಿಂತಿರುಗುವಂತೆ ಮಾಡಿದ್ದರು, ರಾಮನ್ ಕುಟ್ಟಿ ನಾಯರ್. ಆದರೆ, ವಾಸ್ತವದಲ್ಲಿ ರವಿಯೆಂಬ ಇಪ್ಪತ್ತೈದರ ಯುವಕನಿಗೆ ಅಷ್ಟೊಂದು ಮುಗ್ಧತೆ ಇರಲಿಲ್ಲ. ಅವನು ಮನೆಯ ಅಡುಗೆ ಕೆಲಸದವಳ ಕೈ ಹಿಡಿಯುವುದನ್ನು ತಾನು ನೋಡಿದ್ದೆ. ಮೈ ಒರೆಸುವ ಬಟ್ಟೆ ತೆಗೆದುಕೊಳ್ಳಲು ಮರೆತಿದ್ದರಿಂದ ಕೊಳಕ್ಕೆ ಹೋದ ತಾನು ತಕ್ಷಣ ಮರಳಿ ಬಂದಿದ್ದೆ. ಆಗ ಅಡುಗೆಮನೆಯಲ್ಲಿ ಕಂಡ ದೃಶ್ಯವಾಗಿತ್ತದು. ಆಗ ರಮಣಿ ಅಲ್ಲೆಲ್ಲೂ ಇರಲಿಲ್ಲ. ಅವಳೇನಾದರೂ ಆ ದೃಶ್ಯ ಕಂಡರೆ ವಿಷಯ ತಮಗೆ ತಿಳಿಸಿ ರವಿಯನ್ನು ಮರಳಿ ಕಳುಹಿಸುವಂತೆ ಮಾಡುತ್ತಿದ್ದಳು. ರವಿ ಮತ್ತು ಕೆಲಸದವಳ ಶೃಂಗಾರ ಕೇಳಿಗಳು ತನಗೆ ಇಷ್ಟವಿಲ್ಲವೆಂದು ಒಮ್ಮೆ ಹೇಳಿದಾಗ ರಮಣಿ ಕೋಪಿಸಿಕೊಂಡಿದ್ದಳು. ರವಿ ಅಂತಹವನಲ್ಲ, ತಾನು ಅವಳಿಗೆ ಸುಳ್ಳು ಹೇಳುತ್ತಿದ್ದೇನೆಂದು ತನ್ನನ್ನೆ ಆರೋಪಕ್ಕೆ ಗುರಿಪಡಿಸಿದ್ದಳು. ತನ್ನ ಒಂಟಿತನಕ್ಕೆ ಸ್ವಲ್ಪವಾದರೂ ಸಮಾಧಾನ ತರಲು ರವಿಯ ಸಾಮೀಪ್ಯಕ್ಕೆ ಸಾಧ್ಯವಾಗಿದೆಯೆಂದು ಅವಳು ಹೇಳಿದಳು. ಅದಾದ ಅನಂತರ ರವಿಯನ್ನು ಹೊರಹಾಕುವುದರ ಕುರಿತು ತಾನೆಂದೂ ಮಾತನಾಡಿರಲಿಲ್ಲ.

ಪೋರ್ಕ್ಕೊಳದಿಂದ ಇಂದೇ ಹಿಂತಿರುಗುತ್ತೀರಾ? ಟ್ಯಾಕ್ಸಿ ಡ್ರೈವರ್ ಕೇಳಿದ; ಟ್ಯಾಕ್ಸಿಯೊಳಗೆ ಕನ್ನಡಿಯ ತುಣುಕಿನಲ್ಲಿ ಪ್ರತಿಫಲಿಸಿದ ಅವನ ಮುಖದಲ್ಲಿ ವ್ಯಂಗ್ಯದ ಲೇಪವಿತ್ತೆ? ಗೊತ್ತಿಲ್ಲ.

''ಒಂದು ಚೀಲ ಬಿತ್ತನೆಯ ಬೀಜ ತೆಗೆದಿಡುತ್ತೇನೆಂದು ಅಪ್ಪುಣ್ಣಿಯಣ್ಣ ಹೇಳಿದ್ದರು, ಅದು ಸಿಕ್ಕಿದ ಕೂಡಲೇ ಹಿಂತಿರುಗುತ್ತೇನೆ. ಊಟದ ಹೊತ್ತಿಗೆ ಮನೆ ತಲುಪಬೇಕು'' ರಾಮನ್ ಕುಟ್ಟಿ ನಾಯರ್ ಹೇಳಿದರು. ಡ್ರೈವರ್ ಮುಗುಳ್ನಕ್ಕ. ಅವನ ನಗು ಕನ್ನಡಿಯಲ್ಲಿ ಪ್ರತಿಫಲಿಸಿತು.

''ರಮಣಿಯಮ್ಮ ಆರಾಮಾಗಿದ್ದಾರಾ?''

''ರಮಣೀನ... ಅವಳು ಹುಷಾರಾಗಿಯೇ ಇದ್ದಾಳೆ. ಏಕೆ ಕೇಳಿದ್ದು?''

''ಹಾಗಲ್ಲ, ರಮಣಿಯಮ್ಮ ಕುನ್ನಂಕುಳಂ ಆಸ್ಪತ್ರೆಗೆ ಕಳೆದವಾರ ಬಂದಿದ್ರಂತೆ, ಅಂತಹ ವಿಶೇಷವೇನಾದರೂ ಇದೆಯಾ?''

''ರಮಣಿ ಆಸ್ಪತ್ರೆಗಾ, ನನಗೆ ಗೊತ್ತಿಲ್ಲವಲ್ಲ ಗೋಪಿ. ಅದು ರಮಣಿ ಅಲ್ಲದೇ ಇರಬಹುದು.''

''ಅದು ರಮಣಿಯಮ್ಮನೇ, ನಾನೇ ತಾನೆ ಅವರನ್ನ ಮತ್ತೆ ಮನೆಗೆ ಕರ್ಕೊಂಡು ಹೋಗಿ ಬಿಟ್ಟಿದ್ದು.''

''ಒಬ್ಬಳೆ ಬಂದಿದ್ದಳಾ?''

''ಒಬ್ಬರೆ ಅಲ್ಲ, ನಿಮ್ಮ ತಂಗಿ ಮಗನಿದ್ದನಲ್ಲ, ಆ ರವಿ, ಬೆಳ್ಳಗೆ ತೆಳ್ಳಗಿನ ಯುವಕ ಅವನೂ ಜೊತೆಗಿದ್ದ. ಲೇಡಿ ಡಾಕ್ಟರ್ ಏನೋ ಚೀಟಿ ಬರೆದುಕೊಟ್ಟಿದ್ದರು. ಅದನ್ನು ತೆಗೆದುಕೊಂಡು ಕುನ್ನಂಕುಳಂ ಮೆಡಿಕಲ್ ಶಾಪ್‌ಗೆ ಹೋಗಿದ್ದ. ನಲ್ವತ್ತಾರು ರೂಪಾಯಿಗೆನೋ ಮಾತ್ರೆ ತಗೊಂಡ್ರಂತೆ.''

''ಬಹುಶಃ ನನಗೆ ಹೇಳಲು ಮರೆತಿರಬಹುದು, ರಮಣಿಗೆ ಹೊಟ್ಟೆ ನೋವೋ ಏನೋ ಇತ್ತುಂತ ಹೇಳಿದ್ದಳು. ನಾನು ಅದನ್ನ ಮರತೇ ಬಿಟ್ಟಿದ್ದೆ.''

ವಿಷಯವನ್ನು ತುಂಬಾ ಹಗುರವಾಗಿ ನಿಭಾಯಿಸಿದೆನೆಂದು ರಾಮನ್ ಕುಟ್ಟಿ ನಾಯರ್‌ಗೆ ಅನ್ನಿಸಿತು. ತನಗೆ ಹೇಳದೆ ಇರುವ ವಿಷಯವನ್ನು ರಮಣಿ ರವಿಗೆ ಹೇಳುತ್ತಿದ್ದಾಳೆ ಎಂಬುದನ್ನು ಅವನಿಗೆ ನಂಬಲು ಸಾಧ್ಯವಾಗಲಿಲ್ಲ.